ಮತ್ತು ಮೇಲು ತೊಟ್ಟಿ ನಿರ್ಮಾಣ, ಒಳ ಮತ್ತು ಹೊರ ನೀರು ಸರಬರಾಜು ವ್ಯವಸ್ಥೆ ಹಾಗೂ ನೈರ್ಮಲೀಕರಣದ ವ್ಯವಸ್ಥೆ.

ಊ) ಕಾಮಗಾರಿಯನ್ನು ಜುಲೈ 2001ಕ್ಕೆ ಎಲ್ಲಾ ರೀತಿಯಲ್ಲೂ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಬಿ.ಪಿ.ಎಲ್. ಪಟ್ಟಿ ಯ ತಯಾರಿ

674(1114) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ತಾಲ್ಲೂಕಿನಲ್ಲಿ ಬಿ.ಪಿ.ಎಲ್. ಪಟ್ಟಿಯ ಸಿದ್ಧತೆ ಪೂರ್ಣಗೊಂಡಿದೆ, ಹಾಗೂ ತೀರ್ಥ ಮತ್ತು ತಾಲ್ಲೂಕಿನ ಪಟ್ಟಿ ಎಲ್ಲಾ ಹಂತದಲ್ಲೂ ಪೂರ್ಣಗೊಂಡಿದೆಯೇ?

ಆ) ಬಿ.ಪಿ.ಎಲ್. ಪಟ್ಟಿ ಆಧಾರದ ಮೇಲೆ ಸರ್ಕಾರದಿಂದ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ?

ಇ) ಬಿ.ಪಿ.ಎಲ್. ಪಟ್ಟಿ ತಯಾರಾಗಿಲ್ಲವೆಂಬ ಕಾರಣಕ್ಕಾಗಿ ಸರ್ಕಾರದ ಯಾವುದಾದರೂ ಯೋಜನೆಯು ಅನುಷ್ಠಾನಗೊಳ್ಳದೇ ಬಾಕಿ ಇರುತ್ತದೆಯೇ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) 1997 ರ ಕೇಂದ್ರ ಸರ್ಕಾರದ ಮಾರ್ಗ ಸೂಚಿ ಪ್ರಕಾರ 9 ನೇ ಯೋಜನಾವಧಿ 1997-98 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಬಿ.ಪಿ.ಎಲ್ ಪಟ್ಟಿಯ ಸಿದ್ಧತೆ ಪೂರ್ಣಗೊಂಡಿದೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಬಿಪಿ ಎಲ್ ಪಟ್ಟಿ ಪೂರ್ಣಗೊಂಡಿದೆ.

ಆ) ಬಿ.ಪಿ.ಎಲ್. ಪಟ್ಟಿ ಆಧಾರದ ಮೇಲೆ ಎಸ್ ಜಿ ಎಸ್ ವೈ, ಮುಂತಾದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಇಲ್ಲ.

ಕಾಲೇಜುಗಳಿಗೆ ಕಟ್ಟಡ ಸೌಲಭ್ಯ ಒದಗಿಸುವುದು

676 (1104) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1) ರಾಜ್ಯದಲ್ಲಿನ ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡ ಸೌಲಭ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಈ ಕೊರತೆ ನಿವಾರಿಸಲು ಸರ್ಕಾರದ ಉದ್ದೇಶಿತ ಕ್ರಮಗಳೇನು?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು)

1) ಹೌದು

2) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣವನ್ನು ಹಾಗೂ ಈಗಾಗಲೇ ಕಟ್ಟಡ ನಿರ್ಮಾಣ ಪ್ರಾರಂಭಗೊಂಡಿರುವ ಕಾಲೇಜುಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹುಡ್ಕೊ ಸಂಸ್ಥೆಯಿಂದ ರೂ. 1871.00 ಲಕ್ಷಗಳ ನೆರವನ್ನು ಪಡೆಯಲು ನಿರ್ಧರಿಸಲಾಗಿದೆ.

ರಾಜ್ಯದಲ್ಲಿ ಮಾಹಿತಿ ಸಿಂಧು ಕಾರ್ಯಕ್ರಮ

677(1105) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ '' ಮಾಹಿತಿ ಸಿಂದು'' ಕಾರ್ಯಕ್ರಮ ಪ್ರಾರಂಭಿಸಲಾಗಿದೆಯೇ?

ಆ) ಈ ಕಾರ್ಯಕ್ರಮದ ರೂಪುರೇಷುಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಹೌದು

ಆ) ರಾಜ್ಯದಲ್ಲಿ 1000 ಸಾರ್ಕರಿ ಪ್ರೌಢಶಾಲೆ ಗಳಲ್ಲಿ ಓದುತ್ತಿರುವ ಮಕ್ಕಳಿಗೆ ಎರಡು ಹಂತದಲ್ಲಿ ಗಣಕ ಶಿಕ್ಷಣ ನೀಡಲು ರೂಪಿಸಿದೆ.

1) ಗಣಕಯಂತ್ರ ಶಿಕ್ಷಣ:

ವಿದ್ಯಾರ್ಥಿಗಳಲ್ಲಿ ಗಣಕಯಂತ್ರ ಶಿಕ್ಷಣದ ಅರಿವು ಮೂಡಿಸುವುದು ಹಾಗೂ ಅದರ ದಿನನಿತ್ಯದ ಉಪಯುಕ್ತವೆಂದು ಪಾತ್ರದ ಬಗ್ಗೆ ತಿಳುವಳಿಕೆ ಮೂಡಿಸುವುದು, ಮೂಲ ಗಣಕೀಕರಣದ ಕಾರ್ಯಕ್ರಮದ ಬಗ್ಗೆ ಪರಿಚಯಿಸುವುದು.

2) ವಿಷಯಾಧಾರಿತ ಗಣಕಯಂತ್ರ ಶಿಕ್ಷಣ:

ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವ ಶಾಸ್ತ್ರ, ಆಂಗ್ಲಭಾಷೆ ಮತ್ತು ಸಾಮಾಜಿಕ ವಿಜ್ಞಾನ ವಿಷಯಗಳ ಪಠ್ಯಪುಸ್ತಕವನ್ನು ಗಣಕಯಂತ್ರಗಳ ಮುಖೇನ ಶಿಕ್ಷಣ ನೀಡುವುದು.

ಈ ಯೋಜನೆಯನ್ನು ಆಯ್ದ ಖಾಸಗಿ ನಿರ್ವಹಣಾ ಸಂಸ್ಥೆಗಳ ಮೂಲಕ ಸಮಗ್ರ ನಿರ್ವಹಣಾ ಆಧಾರದ (ಟರ್ನ್ ಕೀ) ಮೇಲೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ.